ಕರ್ನಾಟಕ ಸರ್ಕಾರ

# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)

Government of Karnataka

## Karnataka Residential Educational Institutions Society

(An Organisation of Govt. of Karnataka)


ಸಂಖ್ಯೆ:ಕವಶಿಸಸಂ/ಆಡಳಿತ-3/ಶಿಕ್ಷಣ-ದಾಖಲಾತಿ/2014-15 ದಿನಾಂಕ:06-06-2014

**ಸುತ್ತೋಲೆ**

**ವಿಷಯ:** 2014-15ನೇ ಶೈಕ್ಷಣಿಕ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಲ್ಪಸಂಖ್ಯಾತರ ವಸತಿ ಶಾಲೆಗಳಿಗೆ 6ನೇ ತರಗತಿಗೆ ದಾಖಲಾತಿ ಮಾಡಿಕೊಳ್ಳುವಾಗ ಮೀಸಲಾತಿ ಅನುಸರಿಸುವ ಬಗ್ಗೆ.

**ಉಲ್ಲೇಖ:** ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರುರವರ ಪತ್ರ ಸಂಖ್ಯೆ:ಅಸುನಿ/ಮೊದೇವಶಾ/ಸಿಆರ್-20/2014-15 ದಿನಾಂಕ:19-05-2014.

*****

ಸಂಘದಿಂದ ನಿರ್ವಹಣೆಯಾಗುತ್ತಿರುವ ಅಲ್ಪಸಂಖ್ಯಾತರ ಪ್ರತಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಶೇ.75 ಸ್ಥಾನಗಳನ್ನು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಮೀಸಲಿರಿಸಿ ಉಳಿಕೆ ಶೇ.25 ಸ್ಥಾನಗಳನ್ನು ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೀಸಲಿರಿಸಿ 6ನೇ ತರಗತಿಗೆ ದಾಖಲಾತಿ ಮಾಡಿಕೊಳ್ಳಲು **ಪ್ರವೇಶ ಪರೀಕ್ಷಾ ಮಾರ್ಗಸೂಚಿ-2014** ಹಾಗೂ ಸಂಘದಿಂದ ಹೊರಡಿಸಲಾದ ಸುತ್ತೋಲೆಗಳ ಸೂಚನೆಗಳಂತೆ ಕ್ರಮಕೈಗೊಳ್ಳಲು ತಿಳಿಸಲಾಗಿರುತ್ತದೆ.

ಉಲ್ಲೇಖದ ಪತ್ರದಲ್ಲಿ ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ನಿರ್ದೇಶನಾಲಯರವರು ಅಲ್ಪಸಂಖ್ಯಾತರ ವಸತಿ ಶಾಲೆಗಳಲ್ಲಿ ಅಲ್ಪಸಂಖ್ಯಾತರಿಗೆ 6ನೇ ತರಗತಿಗೆ ದಾಖಲಾತಿಗೆ ಮೀಸಲಿರಿಸಿರುವ ಶೇ.75ರ ಸ್ಥಾನಗಳು ಪ್ರವೇಶ ಪರೀಕ್ಷೆಗೆ ಹಾಜರಾಗಿ ಜಿಲ್ಲಾ ಮಟ್ಟದಲ್ಲಿ ಅರ್ಹತೆ ಮತ್ತು ಮೀಸಲಾತಿಯಂತೆ ದಾಖಲಾತಿ ಆಗಲು ನಿರ್ವಹಿಸುವ ಕೌನ್ಸಿಲಿಂಗ್‌ನಲ್ಲಿ ಭರ್ತಿಯಾಗದಿದ್ದಲ್ಲಿ, ಖಾಲಿ ಉಳಿದ, ಅಲ್ಪಸಂಖ್ಯಾತರಿಗೆ ಮೀಸಲಿರುವ ಸ್ಥಾನಗಳನ್ನು ಸಂದರ್ಶನದ ಮೂಲಕ ಅಲ್ಪಸಂಖ್ಯಾತರ ಅರ್ಹ ವಿದ್ಯಾರ್ಥಿಗಳಿಂದ ಭರ್ತಿ ಮಾಡಿಕೊಳ್ಳಲು ತಿಳಿಸಿರುತ್ತಾರೆ. ಆದ್ದರಿಂದ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳಲ್ಲಿ 6ನೇ ತರಗತಿ ಮೀಸಲಿರುವ ಸ್ಥಾನಗಳನ್ನು ಭರ್ತಿ ಮಾಡಲು ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

1. 5ನೇ ತರಗತಿಯಲ್ಲಿ ತೇರ್ಗಡೆಯಾದ ಅಲ್ಪಸಂಖ್ಯಾತರ ವಿದ್ಯಾರ್ಥಿಗಳು ಸಂಘದ ವಸತಿ ಶಾಲೆಗಳಲ್ಲಿ 6ನೇ ತರಗತಿಗೆ ದಾಖಲಾಗುವಲ್ಲಿ ಸೂಕ್ತ ಪ್ರಕಟಣೆಯನ್ನು ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸುವುದು.
2. ದಿನಾಂಕ:08-06-2014ರಿಂದ 13-06-2014ರವರೆಗೆ ಸೂಕ್ತ ದಾಖಲಾತಿಗಳೊಂದಿಗೆ ಅರ್ಜಿ ನೀಡಲು ಕಾಲಾವಕಾಶ ನೀಡುವುದು.


ನಂ. 179, 1,2 ಮತ್ತು 3ನೇ ಮಹಡಿ, ರೂಪಾ ಕಾಂಪ್ಲೆಕ್ಸ್, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು-560 020. ದೂರವಾಣಿ : 080-2356 3366, 23562255 ಟೆಲಿಫ್ಯಾಕ್ಸ್ : 080-2356 2288
#179, 1,2 & 3rd Floor, Roopa Complex, 1st Main Road, Seshadripuram, BANGALORE-560 020. Phone : 080-2356 3366, 2356 2255 Telefax : 080-2356 2288
E-mail : edkreis@rediff.com Website : www.kreis.kar.nic.in

3. ದಿನಾಂಕ:14-06-2014ರಂದು 6ನೇ ತರಗತಿ ದಾಖಲಾತಿಗೆ ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರಕಟಿಸುವುದು.
4. ದಿನಾಂಕ:16-06-2014ರಂದು ಅರ್ಹತಾ ಆಧಾರ ಮೇಲೆ ಪ್ರವೇಶ ಕಲ್ಪಿಸುವುದು.
5. ದಿನಾಂಕ:17-06-2014ರಂದು ಸಂಜೆ 4-30ಕ್ಕೆ ವಿವಿಧ ವಸತಿ ಶಾಲೆಗಳಲ್ಲಿ ಮೇಲ್ಕಂಡಂತೆ ದಿನಾಂಕ:16-06-2014ರಂದು ಪ್ರವೇಶ ಕಲ್ಪಿಸಿದ ನಂತರ ಖಾಲಿ ಇರುವ ಸ್ಥಾನಗಳ ಪಟ್ಟಿಯನ್ನು ಪ್ರಕಟಿಸುವುದು.
6. ದಿನಾಂಕ:17-06-2014ರಂದು ಸಾಮಾನ್ಯ ಪರೀಕ್ಷೆಯಲ್ಲಿ ಅರ್ಹತೆ ಹೊಂದಿ ಮೂಲಭೂತ ಸೌಕರ್ಯವಿಲ್ಲದೆ 6ನೇ ತರಗತಿಯ ಪ್ರಾರಂಭವನ್ನು ಸ್ಥಗಿತಗೊಳಿಸಿರುವ ಶಾಲೆಗಳಿಗೆ ಆಯ್ಕೆಯಂತೆ ಪ್ರವೇಶ ದೊರೆಯದೇ ಇರುವ ವಿದ್ಯಾರ್ಥಿಗಳಿಗೆ ಮೀಸಲಾತಿ ಸೂಚನೆಗಳಂತೆ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ವಸತಿ ಶಾಲೆಗಳಲ್ಲಿ ಖಾಲಿ ಉಳಿದ ಸ್ಥಾನಗಳು ಪ್ರವೇಶ ನೀಡುವುದು.
7. ಕ್ರಮಸಂಖ್ಯೆ:6ರಂತೆ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಸ್ಥಾನಗಳನ್ನು ನೀಡಿದ ನಂತರ ಅಲ್ಪಸಂಖ್ಯಾತರಿಗೆ ಮೀಸಲಿರುವ ಸ್ಥಾನಗಳು ಉಳಿದಲ್ಲಿ ಅಂತಹ ಸ್ಥಾನಗಳನ್ನು ಅರ್ಹತೆ ಮತ್ತು ಮೀಸಲಾತಿಯಂತೆ ಸಾಮಾನ್ಯ ಪ್ರವೇಶ ಪರೀಕ್ಷೆಯ ಪಟ್ಟಿಯಲ್ಲಿ ಪ್ರವೇಶ ದೊರೆಯದೇ ಇರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗ ವಿದ್ಯಾರ್ಥಿಗಳಿಗೆ ಮೀಸಲಾತಿ ಸೂಚನೆಯಂತೆ ಪ್ರವೇಶ ನೀಡುವುದು.
8. ಮೇಲಿನ ಸೂಚನೆಗಳನ್ನು ಕಟ್ಟು ನಿಟ್ಟಾಗಿ ಪಾಲಿಸಿ ಪ್ರವೇಶ ಪಡೆದ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಪಟ್ಟಿ ಹಾಗೂ ಸಾಕಷ್ಟು ಅಲ್ಪಸಂಖ್ಯಾತ ವಿದ್ಯಾರ್ಥಿಗಳು ದೊರೆಯದೇ ಉಳಿದ ಸ್ಥಾನಗಳಿಗೆ ಭರ್ತಿ ಮಾಡಿದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗ ವಿದ್ಯಾರ್ಥಿಗಳ ಪಟ್ಟಿಯನ್ನು ತಪ್ಪದೇ ಸಂಘದ ಇ-ಮೇಲ್ ಮೂಲಕ ತಿಳಿಸುವುದು.

ಮೇಲ್ಕಂಡಂತೆ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ನೀಡಿದ ಸ್ಥಾನಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗ ವಿದ್ಯಾರ್ಥಿಗಳಿಗೆ ಅರ್ಹತೆ ಮತ್ತು ಮೀಸಲಾತಿಯಂತೆ 6ನೇ ತರಗತಿಗೆ ದಾಖಲಾತಿ ಮಾಡಿರುವ ಬಗ್ಗೆಯ ವಿವರಗಳುಳ್ಳ ದಾಖಲಾತಿಗಳನ್ನು ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಜಿಲ್ಲೆಯ ಕಛೇರಿಗಳಲ್ಲಿ ಮತ್ತು ಸಂಬಂಧಪಟ್ಟ ವಸತಿ ಶಾಲೆಯ ಪ್ರಾಂಶುಪಾಲರು ವಸತಿ ಶಾಲೆಗಳಲ್ಲಿ ತಪ್ಪದೇ ನಿರ್ವಹಿಸುವುದು. ಮತ್ತು ಈ ಬಗ್ಗೆ ಮಾಹಿತಿಯನ್ನು ಸಂಘಕ್ಕೆ ವರದಿ ಮಾಡಲು ತಿಳಿಸಿದೆ.